ಶ್ರೀ ಧರ್ಮಸಿಂಗ್.—ಈಗ ಹೊಸ ಸರ್ಕಾರ ಬಂದ ಮೇಲೆ ಹರಿಜನ ಗಿರಿಜನರ ಅಭಿವೃದ್ಧಿಯ ಬಗ್ಗೆ ಸ್ಲಮ್ ಕ್ಲಿಯರೆನ್ಸ್ ಬಗ್ಗೆ, ಕುಡಿಯುವ ನೀರಿನ ಬಗ್ಗೆ, ರೀಮಾಡ್ಲಿಂಗ್ ಆಫ್ ಪೈಪ್ ಲೈನ್ ಬಗ್ಗೆ ೮೬ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ಊರನ್ನು ಅಭಿವೃದ್ಧಿ ಮಾಡಬೇಕಾದರೆ ಇನ್ನೂ ಹೆಚ್ಚು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ.

Siteless People Living in Badami Municipal Area

465 SRI B. B. CHIMMANAKATTI (Badami) —Will the Minister for Housing and Urban Development be pleased to state :—

(a) the number of siteless families coming under the jurisdiction of Badami Municipality ;

(b) the number of persons who have secured the sites so far; (upto date information may please be furnished);

(c) out of the sites allotted, the number of sites allotted now to Harijans, Girijans and Backward Persons ;

(d) whether they would take action for the allotment of sites to siteless families during the current year ?

SRI DHARM SINGH (Minister for Housing and Urban Development)—

(a) 515

(b)

1975-76	...	114
1976-77	...	58
1977-78	...	37
1978-79	...	43
1979-80	...	Nil
Total	...	252

(c)

Harijan	...	29
Girijan	...	Nil
Backward	...	223
Total	...	252

(d) Attempt is being made.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯ (ಅ) ಮತ್ತು (ಆ)ಗೆ ಉತ್ತರವಾಗಿ ೧೯೭೫ ರಿಂದ ೭೯ ರವರೆಗೆ ೨೫೨ ನಿವೇಶನವನ್ನು ಹಂಚಿದ್ದಾರೆ ಎಂದು ಇದರಲ್ಲಿ ತೋರಿಸಿದ್ದಾರೆ. ಮತ್ತು ಇದರಲ್ಲಿ ವಿಶೇಷವಾಗಿ ಹರಿಜನರಿಗೆ ೭೯ ನಿವೇಶನವನ್ನು ಹಂಚಿದ್ದೇವೆ ಗಿರಿಜನರು ಯಾರೂ ಇಲ್ಲ ಎಂದು ಹೇಳಿದ್ದಾರೆ. ೫ ವರ್ಷದಿಂದಲೂ ಕೂಡ ಗಿರಿಜನರು ಸಿಕ್ಕಲಿಲ್ಲವೇ ? ಹರಿಜನರಿಗೆ ಸಂಖ್ಯೆಯಲ್ಲಿ ಹಂಚಿದ್ದಾರೆಯೇ ? ಒಂದು ವೇಳೆ ಅವರು ಸರಿಯಾದ ಪ್ರಮಾಣದಲ್ಲಿ ಈ ಹರಿಜನ ಮತ್ತು ಗಿರಿಜನರಿಗೆ ಮತ್ತು ನೊಮ್ಯಾಡಿಕ್ ಜನರಿಗೆ ಈನಿನೇಶನಗಳನ್ನು ಹಂಚದೇ ಹೋಗಿದ್ದರೆ ಅಂಥಾ ಮುನಿಸಿಪಾಲಿಟಿಯವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಧರ್ಮಸಿಂಗ್.—ಈಗಾಗಲೆ ನಾವು ಬಾದಾಮಿ ಪುರಸಭೆ ವ್ಯಾಪ್ತಿಯಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ನಿವೇಶನಗಳನ್ನು ಹಂಚಿದ್ದೇವೆ ಅನ್ನುವುದನ್ನು ಇದರಲ್ಲಿ ತಿಳಿಸಿದ್ದೇವೆ. ಸರ್ಕಾರದ ಧೋರಣೆಯೂ ಕೂಡ ಹರಿಜನ ಮತ್ತು ಗಿರಿಜನರಿಗೆ ಮತ್ತು ನೊಮ್ಯಾಡಿಕ್ ಜನರಿಗೆ ಈ ನಿವೇಶನಗಳನ್ನು ಹಂಚಬೇಕು ಎನ್ನುವುದೇ ಆಗಿದೆ. ಒಂದುವೇಳೆ ಅವರಿಗ್ಯಾರಿಗೂ ಸರಿಯಾಗಿ ಸಿಕ್ಕಿಲ್ಲ ಎಂದರೆ ಆ ಬಗ್ಗೆ ಮಾನ್ಯ ಸದಸ್ಯರು ಆ ವಿವರಣೆಯನ್ನು ತಂದುಕೊಟ್ಟರೆ ಅವರಿಗೆ ಏತಕ್ಕೆ ಸಿಗಲಿಲ್ಲ, ಏನು ಕಾರಣ ಎಂಬುದನ್ನು ಪರಿಶೀಲನೆ ಮಾಡಿ ತಕ್ಕ ಕ್ರಮವನ್ನು ಕೈಗೊಳ್ಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಒಟ್ಟು ೫೧೫ ನಿವೇಶನಗಳಲ್ಲಿ ೨೫೨ ನಿವೇಶನಗಳನ್ನು ಹರಿಜನ–ಗಿರಿಜನ ಮತ್ತು ಹಿಂದುಳಿದ ವರ್ಗಕ್ಕೆ ಹಂಚಿದ್ದೀರಿ. ಇನ್ನು ಉಳಿದ ೨೬೩ ನಿವೇಶನಗಳನ್ನು ಈ ವರ್ಷದಲ್ಲಾದರೂ ಹಂಚುವುದಕ್ಕೆ ಏನಾದರೂ ಕಾರ್ಯಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಧರ್ಮಸಿಂಗ್.—ಈಗಾಗಲೇ ಆ ಬಗ್ಗೆ ಕ್ರಮ ಕೈಗೊಳ್ಳುತ್ತಿದ್ದೇವೆ. ಎಲ್ಲೆಲ್ಲಿ ಲ್ಯಾಂಡ್ ಆಕ್ವೈರ್ ಮಾಡಿಕೊಳ್ಳಬೇಕೋ ಅದನ್ನು ಮಾಡಿಕೊಳ್ಳುತ್ತಿದ್ದೇವೆ, ಆದರ ಬಗ್ಗೆ ನಮಗೆ ರಿಪೋರ್ಟ್ ಸಹ ಬಂದಿದೆ. ಎಲ್ಲೆಲ್ಲಿ ನಿವೇಶನರಹಿತ ಜನ ಇದ್ದಾರೆ ಅವರಿಗೆಲ್ಲರಿಗೂ ಕೂಡ ನಾವು ಲ್ಯಾಂಡ್ ಅನ್ನು ಆಕ್ವೈರ್ ಮಾಡಿಕೊಂಡು ನಿವೇಶನಗಳನ್ನು ಕೊಡಬೇಕು ಎನ್ನುವ ಉದ್ದೇಶ ಇದೆ. ಆದುದರಿಂದ ಬಾದಾಮಿಗೆ ಸೇರಿದಂಥಾ ಸರ್ವೆ ನಂಬರ್ ೨೦೦, ೨೦೧ ಮತ್ತು ೫೩೨ ಈ ಜಮೀನುಗಳನ್ನು ವಶಪಡಿಸಿಕೊಂಡು ಸೈಟುಗಳನ್ನು ಮಾಡುತ್ತಿದ್ದಾರೆ. ಇದಕ್ಕೆ ೪ ಲಕ್ಷ ೨೫ ಸಾವಿರ ರೂಪಾಯಿ ಖರ್ಚಾಗುತ್ತದೆ. ಆದರಲ್ಲಿ ಈಗಾಗಲೇ ೨ ಲಕ್ಷ ೫೦ ಸಾವಿರ ರೂಪಾಯಿ ಕೊಟ್ಟಿದ್ದೇವೆ. ಆ ಲ್ಯಾಂಡನ್ನು ಈಗಾಗಲೇ ಆಕ್ವೈರ್ ಮಾಡಿದ್ದೇವೆ, ನಿವೇಶನಗಳನ್ನೂ ಸಹ ಅವರಿಗೆಲ್ಲಾ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದಾರೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಬಾದಾಮಿಯಲ್ಲಿ ಈಗ ಹರಿಜನರಿಗೆ ೭೯ ನಿವೇಶನಗಳನ್ನು ಏನು ಹಂಚಿದ್ದೀರೋ ಇದರಲ್ಲಿ ಸುಮಾರು ೫೦ ಜನ ಹರಿಜನ ಗಿರಿಜನರಿಗೆ ಮನೆಗಳು ಇರಲಾರದು. ಅವರು ಇದರಿಂದ ಬಹಳವಾಗಿ ಬಳಲುತ್ತಿದ್ದಾರೆ. ಆದುದರಿಂದ ಈ ಪ್ರಸಕ್ತ ಸಾಲಿನಲ್ಲಿ ಕನಿಷ್ಟಪಕ್ಷ ೫೦ ಮನೆಗಳನ್ನಾದರೂ ಅವರಿಗೆ ಕಟ್ಟಿಸಿಕೊಡುವ ಒಂದು ಯೋಜನೆ ಮಾಡುತ್ತಿರಾ ?

ಶ್ರೀ ಧರ್ಮಸಿಂಗ್.—ಈಗ ಮಾನ್ಯ ಸದಸ್ಯರು ಈ ಬಗ್ಗೆ ಏನು ಹೇಳಿದ್ದಾರೆ ಅದನ್ನು ವಿಚಾರ ಮಾಡಿ ಅದರ ಬಗ್ಗೆ ಕಾರ್ಯಕ್ರಮ ಕೈಗೊಳ್ಳುತ್ತೇನೆ.

Vacant posts of Lecturers in Mangalore Government College

585. SRI K. RAMABHAT (Puttur).—Will the Minister for Education be pleased to state :—

(*a*) the number of posts of lecturers vacant in Government College Mangalore and since when the posts are vacant;

(*b*) the reasons for not appointing lecturers to these vacant posts;

(*c*) when these vacant posts would be filled up ?